**ದಿನಾಂಕಃ 06.09.2022 ರ ಆದೇಶದಂತೆ ಸಾಕ್ಷಿಯನ್ನು ದಿನಾಂಕಃ 17.09.2022 ರಂದು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀಸವಾಲುಃ 2 ಮತ್ತು 3 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಲಕ್ಷ್ಮೀಕಾಂತನ ತಾಯಿಯ ಹೆಸರು ಗಂಗಮ್ಮ. ಸದರಿ ಗಂಗಮ್ಮನಿಗೆ 5 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ನರಸಿಂಹಸ್ವಾಮಿಯ ತಾಯಿಯ ಹೆಸರು ಸುಜಾತಾ. ಸದರಿ ನರಸಿಂಹಸ್ವಾಮಿ ಅಂದರೆ ವಾದಿ ಅವರ ತಂದೆ ತಾಯಿಗೆ ಒಬ್ಬರೆ ಮಗ ಬೇರೆ ಯಾರು ಮಕ್ಕಳು ಇರುವುದಿಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. 3 ನೇ ಪ್ರತಿವಾದಿ 1 ನೇ ಪ್ರತಿವಾದಿಯ 2 ನೇ ಮಗ ಎಂದರೆ ಸರಿ. ಸುಜಾತ ರವರ ಆರೋಗ್ಯ ಸರಿ ಇಲ್ಲದಾಗ ಅವರನ್ನು ಯಾರು ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಸುಜಾತ ತೀರಿಕೊಂಡು 15 ವರ್ಷಗಳಾಗಿವೆ. 1 ನೇ ಪ್ರತಿವಾದಿ ತೀರಿಕೊಂಡು 1 ವರ್ಷಕ್ಕಿಂತ ಹೆಚ್ಚಾಗಿದೆ. ಲಕ್ಷ್ಮೀಕಾಂತರವರ ಆಸ್ತಿಗಳು ಅವರ ಅಣ್ಣ ತಮ್ಮಂದಿರ ಮಧ್ಯೆ ಹಂಚಿಕೆ ಯಾಗಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ. ಸದರಿ ಸಂಗತಿ ಸಾಬಿತುಪಡಿಸಲು ಪಾಲುಪಟ್ಟಿ, ಮ್ಯುಟೇಷನ್ ದಾಖಲೆ ಮತ್ತು ಪಹಣಿ ಪತ್ರಿಕೆ ಸಲ್ಲಿಸಿದೆ.

1 ನೇ ಪ್ರತಿವಾದಿ ಸರ್ಕಾರಿ ನೌಕರಿ ಮಾಡಿ ನಿವೃತ್ತಿಯಾಗಿದ್ದರು ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ಟಿ.ಎ.ಪಿ.ಎಂ.ಸಿ ನಲ್ಲಿ ಕಾರ್ಯದರ್ಶಿಯಾಗಿದ್ದರು ಎನ್ನುತ್ತಾರೆ. ಟಿ.ಎ.ಪಿ.ಎಂ.ಸಿ ಪ್ರಾಧಿಕಾರ ಸರ್ಕಾರದ ಒಂದು ಅಂಗ ಸಂಸ್ಥೆ ಎಂದರೆ ನನಗೆ ಗೊತ್ತಿಲ್ಲ. ಟಿ.ಎ.ಪಿ.ಎಂ.ಸಿ ಪ್ರಾಧಿಕಾರದಲ್ಲಿ ಲಕ್ಷ್ಮೀಕಾಂತ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಗೆ ಸಾಕಷ್ಟು ಆದಾಯ ಇತ್ತು ಎಂಬುದು ನನಗೆ ಗೊತ್ತಿಲ್ಲ. ನರಸಿಂಹಸ್ವಾಮಿಯವರ ತಾಯಿ ಸುಜಾತ ಗೃಹಿಣಿಯಾಗಿದ್ದರು ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ಸುಜಾತರವರು ರೇಷ್ಮೆ ಸಾಗಾಣಿಕೆ ಮಾಡುತ್ತಿದ್ದರು. ಅವರು ನೆಲಮಂಗಲ ತಾಲ್ಲೂಕಿನ ಮಲ್ಲದಬಾಣವಾಡಿಯಲ್ಲಿ ರೇಷ್ಮೆ ಸಾಗಾಣಿಕೆ ಮಾಡುತ್ತಿದ್ದರು. ಸುಜಾತಾ ರೇಷ್ಮೆ ಸಾಗಾಣಿಕೆ ಮಾಡುತ್ತಿದ್ದರೆಂದು ನನ್ನ ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ರೇಷ್ಮೆ ಮಾರಾಟದ ರಶೀದಿಗಳು ಇರುತ್ತವೆ ಎಂದರೆ ಸರಿ. ಸುಜಾತಾರವರ ರೇಷ್ಮೆ ಸಾಗಾಣಿಕೆ ಮಾಡುತ್ತಿದ್ದರೆಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ಸುಜಾತರವರು

ರೇಷ್ಮೆ ಸಾಗಾಣಿಕೆ ಮಾಡುತ್ತಿದ್ದರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸುಜಾತರವರಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ಅವರ ತಂದೆ ಕೊಟ್ಟ ಆಸ್ತಿಯಿಂದ ಅವರಿಗೆ ಸಾಕಷ್ಟು ಆದಾಯ ಇತ್ತು ಎನ್ನುತ್ತಾರೆ. ಸುಜಾತರವರಿಗೆ ಅವರ ತಂದೆ ಕೊಟ್ಟ ಜಮೀನು 127/1-08 ರಲ್ಲಿ 39 ಗುಂಟೆ, 127/1 ಬಿ 4 ಗುಂಟೆ ಇರುತ್ತವೆ. 2003 ರಲ್ಲಿ ನನ್ನ ಮತ್ತು ನರಸಿಂಹಸ್ವಾಮಿ ಎಂ.ಎಲ್ ಅವರ ಮದುವೆಯಾಗಿದೆ. ನನ್ನ ಮದುವೆಗಿಂತ ಮುಂಚೆ ನರಸಿಂಹಸ್ವಾಮಿಯ ಕುಟುಂಬದಲ್ಲಿ ಯಾವ ಯಾವ ದಾಖಲೆಗಳು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸುಜಾತರವರಿಗೆ ಅವರ ತಂದೆ ಅರಿಶಿಣ ಕುಂಕುಮಕ್ಕಾಗಿ ಪಾಲುಪಟ್ಟಿಯ ಮೂಲಕ ಜಮೀನು ಕೊಟ್ಟಿದ್ದರು. ಸದರಿ ಪಾಲು ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಪಾಲುಪಟ್ಟಿಯಲ್ಲಿ 127/1-08 ರಲ್ಲಿ 39 ಗುಂಟೆ, 127/1 ಬಿ 4 ಗುಂಟೆ ಜಮೀನುಗಳು ಸೇರಿಸಲ್ಪಟ್ಟಿವೆ. ಸದರಿ ಪಾಲು ವಿಭಜನೆ ದಿನಾಂಕಃ 15.04.1984 ರಲ್ಲಿ ಆಗಿದೆ. ನಾನು ದ್ವಿತಿಯ ಪಿ.ಯು.ಸಿ ಓದಿದ್ದೇನೆ. **ಈ ಹಂತದಲ್ಲಿ ಸಾಕ್ಷಿದಾರರಿಗೆ ಪ್ರತಿವಾದಿಯರ ಪರ ವಕೀಲರು ಒಂದು ಕ್ರಯಪತ್ರದ ಧೃಡೀಕೃತ ಪ್ರತಿಯನ್ನು ಮೊಖಾಬಿಲೆ ಮಾಡಿ ಅದರ ಮೂಲಕ ಸುಜಾತರವರು ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿದಾರರು ಸದರಿ ದಾಖಲೆಯು ಸುಜಾತಾರವರಿಗೆ ಸಂಭಂದಪಟ್ಟಿದೆ ಎಂದು ಉತ್ತರಿಸಿರುವುದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾತು.** ಸುಜಾತರವರಿಗೆ ಅವರ ತಂದೆ ಅರಿಶಿನ ಕುಂಕುಮಕ್ಕಾಗಿ ಜಮೀನು ಕೊಟ್ಟಿದ್ದರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆನಂ.127/1 ಎ, ಸರ್ವೆನಂ.127/1 ಬಿ, ಸರ್ವೆನಂ.127/2 ಎ ಜಮೀನು 1ನೇ ಪ್ರತಿವಾದಿ ತನ್ನ ಸ್ವಂತ ಆದಾಯದಿಂದ ತನ್ನ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸುಳ್ಳು. ಸದರಿ ಆಸ್ತಿಗಳನ್ನು ಖರೀದಿ ಮಾಡಿದಾಗಿನಿಂದ 1ನೇ ಪ್ರತಿವಾದಿ ಆ ಆಸ್ತಿಗಳ ಸ್ವಾಧೀನನುಭವದಲ್ಲಿದ್ದರು ಎಂದರೆ ಸುಳ್ಳು. ಸರ್ವೆನಂ.127/1 ರಲ್ಲಿ 1ನೇ ಪ್ರತಿವಾದಿಯ ಮನೆ ಇದೆ ಎಂದರೆ ನಮ್ಮ ಮನೆಯು ಕೂಡಾ ಇದೆ ಎನ್ನುತ್ತಾರೆ. ಸರ್ವೆನಂ.127/1 ರಲ್ಲಿ ನರಸಿಂಹಸ್ವಾಮಿಗೆ ಹಾಗೂ ಎಂ.ಪಿ. ಲಕ್ಷ್ಮೀಕಾಂತರವರಿಗೆ ತಲಾ ಒಂದೊಂದು ಮನೆ ಇವೆ ಎಂದರೆ ಸರಿ. ಸುಜಾತರವರು ಪ್ರತಿವಾದಿಯರ ಜೊತೆ ಒಟ್ಟು

ಕುಟುಂಬದಲ್ಲಿದ್ದರು ಎಂದರೆ ಸರಿಯಲ್ಲ. ಸುಜಾತರವರು ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿ. ಸುಜಾತರವರ ಸೇವೆ ಮಾಡುವ ಉದ್ದೇಶದಿಂದ 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಮದುವೆ ಮಾಡಿಕೊಂಡಿದ್ದ ಎಂದರೆ ಸುಳ್ಳು. ಆದ್ದರಿಂದ 1 ಮತ್ತು 2 ನೇ ಪ್ರತಿವಾದಿಯರ ಮಧ್ಯೆ ಇದ್ದ ಸಂಭಂದವನ್ನು ಸುಜಾತಾರವರು ಯಾವತ್ತು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸುಜಾತರವರು ಪ್ರತಿವಾದಿಯರ ಮೇಲೆ ಅವರು ಜೀವಂತವಿದ್ದಾಗ ಯಾವುದೇ ಕೇಸು ಹಾಕಿಲ್ಲ.

ಐಟಂ ನಂ.4 ನ್ನು 1 ನೇ ಪ್ರತಿವಾದಿಯು ಕೃಷ್ಣಪ್ಪರವರಿಂದ ನೊಂದಣಿ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದಾರೆ ಎಂದರೆ ಸರಿ. ಖರೀದಿ ಮಾಡಿದ ನಂತರ ಅದರ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ವರ್ಗಾವಣೆಯಾಗಿವೆ. ಕ್ರಯ ಮಾಡಿದಾಗಿನಿಂದ 1 ನೇ ಪ್ರತಿವಾದಿಯ ಐಟಂ ನಂ.4 ರ ಸ್ವಾಧೀನತೆಯಲ್ಲಿದ್ದರು ಎಂದರೆ ನನ್ನ ಗಂಡ ಸ್ವಾಧೀನತೆಯಲ್ಲಿದ್ದರು ಎನ್ನುತ್ತಾರೆ. ಐಟಂ ನಂ.4 ಒಂದನೇ ಪ್ರತಿವಾದಿಯ ಸ್ವತ್ತು ಎಂದರೆ ಸರಿಯಲ್ಲ. ಐಟಂ ನಂ.4 ನ್ನು ದಿನಾಂಕಃ 20.09.2013 ರಂದು ನೊಂದಾಯಿತ ದಾನಪತ್ರದ ಮೂಲಕ 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ದಾನ ಮಾಡಿದ್ದಾರೆಂದಂಬುದು ಗೊತ್ತಿಲ್ಲ. ಅಂದಿನಿಂದ 3 ನೇ ಪ್ರತಿವಾದಿ ಐಟಂ ನಂ.4 ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಅಪ್ರಾಪ್ತ ವಯಸ್ಕನಾಗಿರುವುದರಿಂದ ಅವರ ತಾಯಿ 2 ನೇ ಪ್ರತಿವಾದಿ 4 ನೇ ನೋಡಿಕೊಳ್ಳುತ್ತಿದ್ದಾರೆಂದರೆ ಸರಿಯಲ್ಲ. ಸದರಿ ದಾನಪತ್ರವನ್ನು ನನ್ನ ಗಂಡ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದಾರೆ. ಐಟಂ ನಂ.1 ರಲ್ಲಿ ಒಟ್ಟು 1 ಎಕರೆ 10 ಗುಂಟೆ ಪೈಕಿ 25 ಗುಂಟೆಯನ್ನು ದಿನಾಂಕಃ 12.11.2013 ರಂದು ನೊಂದಾಯಿತ ದಾನಪತ್ರ ಮೂಲಕ 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.3 ನ್ನು ದಿನಾಂಕಃ 12.12.2013 ರಂದು ನೊಂದಾಯಿತ ದಾನಪತ್ರದ ಮೂಲಕ 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.5 ರಲ್ಲಿರುವ 2 ನೇ ನಂಬರಿನ ಆಸ್ತಿಯನ್ನು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಿನಾಂಕಃ 03.11.2014 ರಂದು ದಾನ ಮಾಡಿದ್ದಾರೆ ಎಂದರೆ ಸರಿ. ಐಟಂ ನಂ.5 ರಲ್ಲಿ ಇರುವ ಇನ್ನೊಂದು 55X20 ಅಳತೆಯ ಸ್ವತ್ತನ್ನು ದಿನಾಂಕಃ 08.07.2014 ರಂದು ನೊಂದಾಯಿತ

ದಾನಪತ್ರದ ಮೂಲಕ 1 ನೇ ಪ್ರತಿವಾದಿ 3 ನೇ ಪತಿವಾದಿಗೆ ದಾನ ಮಾಡಿದ್ದಾರೆ ಎಂದರೆ ಸರಿ. ಐಟಂ ನಂ.5 ರಲ್ಲಿ ಇನ್ನೊಂದು ಮನೆಯಲ್ಲಿ ನಾನು ವಾಸಿಸುತ್ತಿದ್ದೆ ಅದನ್ನು ನನ್ನ ಗಂಡ ನರಸಿಂಹಸ್ವಾಮಿಗೆ ಕೊಡಲಾಗಿತ್ತು ಎಂದರೆ ಸರಿ. ನಾನು ವಾಸಿಸುವ ಮನೆಯಲ್ಲಿ ನಾನು ಮಾಲೀಕಳಾಗಿ ಸ್ವಾಧೀನಾನುಭವದಲ್ಲಿದ್ದೇನೆಂದರೆ ಸರಿ. ದಾವಾ ಅನೂಸೂಚಿಯಲ್ಲಿ ಹೇಳಿರುವ ಯಾವುದೇ ಚರಾಸ್ತಿಗಳು ಅಸ್ತಿತ್ವದಲ್ಲಿರಲಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳು ನನ್ನ ಗಂಡ ಮತ್ತು 1 ನೇ ಪ್ರತಿವಾದಿ ಮಧ್ಯೆ ಈಗಾಗಲೇ ವಿಭಜನೆಯಾಗಿವೆ ಎಂದರೆ ಸರಿಯಲ್ಲ. ಸರ್ವೆ ನಂ.127/2 ಎ ರಲ್ಲಿರುವ 39 ಗುಂಟೆಯಲ್ಲಿ ಹತ್ತೊಂಬತ್ತುವರೆ ಗುಂಟೆ ನನ್ನ ಗಂಡನ ಪಾಲಿಗೆ ಬಂದಿತ್ತು ಎಂದರೆ ಸಾಕ್ಷಿದಾರರು ನಮ್ಮ ಮಾವ ನನ್ನ ಗಂಡನಿಗೆ ಕೊಟ್ಟಿದ್ದರು ಎನ್ನುತ್ತಾರೆ. ನನ್ನ ಗಂಡ ಸತ್ತ ಮೇಲೆ ಇವತ್ತಿಗೂ ಕೂಡಾ ನಾನು ಸರ್ವೆ ನಂ.127/2 ಎ ದಲ್ಲಿ ಇರುವ ಜಮೀನಿನ ಸ್ವಾಧೀನಾನುಭವಲ್ಲಿದ್ದೇನೆ ಎಂದರೆ ಸರಿ. ಅದರಲ್ಲಿ ಅಡಿಕೆ ತೋಟ ಇದೆ ಎಂದರೆ ಸರಿ. ಸದರಿ ಅಡಿಕೆ ತೋಟದಲ್ಲಿ ಇದ್ದ ಈ ವರ್ಷದ ಬೆಳೆಯನ್ನು ನಾನು ಒಬ್ಬ ಮಂಜುನಾಥ ಎನ್ನುವವರಿಗೆ ಮಾರಿದ್ದೇನೆ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ಗಂಡ ಮತ್ತು ನಾವು ಸೇರಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸರ್ವೆ ನಂ.127 ರಲ್ಲಿ 19 ಗುಂಟೆ ಮತ್ತು ಐಟಂ ನಂ.4 ರಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸಾಕ್ಷಿದಾರರು ಲಕ್ಷ್ಮೀಕಾಂತ ಜೀವಂತ ಇರುವವರೆಗೆ ಸ್ವಾಧೀನಾನುಭವದಲ್ಲಿದ್ದರು ಅವರು ಸತ್ತ ನಂತರ ನನ್ನ ಗಂಡ ಜಗಳ ಮಾಡಿ ಆ ಜಮೀನುಗಳಿಂದ ಬಂದ ಅಡಿಕೆ ಹಣದಲ್ಲಿ ಅರ್ಧ ಪಡೆದುಕೊಂಡಿದ್ದರು ಎನ್ನುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ/-
ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು,
ಗುಬ್ಬಿ.